ಸಹೃದಯ ಕಾವೇರಿ ಕುಟುಂಬದವರಿಗೆ,

ಕಾವೇರಿ ಕನ್ನಡ ಸಂಘದ 2025ರ ಸಮಿತಿ ಪರವಾಗಿ ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು. ನಮ್ಮೆಲ್ಲರ ಹೆಮ್ಮೆಯ ಕಾವೇರಿ ಕನ್ನಡ ಸಂಘದ 53ನೆಯ ಅಧ್ಯಕ್ಷೆಯಾಗಿ ಆಯ್ಕೆ ಆಗಿರುವುದು ನನಗೆ ಸನ್ಮಾನ ಮತ್ತು ಉತ್ಸಾಹ ತಂದಿದೆ. ಬಾಲ್ಯದಲ್ಲಿ ಭಾರತದಲ್ಲಿರುವಾಗಲೇ ನಾನು  ವಾಷಿಂಗ್ಟನ್ ಡಿಸಿ ಪ್ರದೇಶದ ಕಾವೇರಿ ಕನ್ನಡ ಸಂಘದ ಬಗ್ಗೆ ಕೇಳಿದ್ದೆ. ಈಗ ಅದೇ ಸಂಘದಲ್ಲಿ ಅನೇಕ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಬಳಿಕ ಅಧ್ಯಕ್ಷೆ ಆಗಿರುವುದಕ್ಕೆ ನಿಮಗೆಲ್ಲರಿಗೂ ಕೃತಜ್ಞಳಾಗಿದ್ದೇನೆ. ನನಗೆ ಸ್ಫೂರ್ತಿದಾಯಕವಾಗಿರುವವರು ಕಳೆದ ಅರ್ಧ ಶತಮಾನದಿಂದ ಕಾವೇರಿಯನ್ನು ಪೋಷಿಸಿ ಬೆಳೆಸಿದ ಹಿಂದಿನ ಅಧ್ಯಕ್ಷರು ಮತ್ತು ಸಮಿತಿಯವರು. ಈ ವರ್ಷ ನಮ್ಮ ಸಮಿತಿಯಲ್ಲಿ ಹಳಬರು ಮತ್ತು ಹೊಸಬರು ಸೇರಿ ಎಲ್ಲ ಕಾರ್ಯಕ್ರಮಗಳನ್ನು ಹೆಚ್ಚಿನ ಉತ್ಸುಕತೆಯಿಂದ ಮಾಡಲು ಸಿದ್ಧರಾಗಿದ್ದೇವೆ. ಕಳೆದ ಕೆಲವಾರು ವರ್ಷಗಳಿಂದ, ಎಲ್ಲರ ಸಹಕಾರದಿಂದ ಕಾರ್ಯಕ್ರಮಗಳನ್ನು ಸಂಘಟಿಸಿ ಉತ್ತಮ ಪ್ರತಿಕ್ರಿಯೆಯನ್ನು ಪಡೆದಿದ್ದೇವೆ, ಈ ವರ್ಷವೂ ಅದೇ ರೀತಿಯ ಪ್ರೋತ್ಸಾಹ ಮತ್ತು ಸಹಕಾರ ನೀಡುವಿರೆಂದು ನನಗೆ ವಿಶ್ವಾಸವಿದೆ. ನಿಮ್ಮ ದೃಢವಾದ ಬೆಂಬಲ, ಮುಂದುವರಿದ ಮತ್ತು ಸ್ಥಿರವಾದ ಪ್ರೋತ್ಸಾಹ ಮತ್ತು ಪ್ರತಿಕ್ರಿಯೆಗಾಗಿ ಎಲ್ಲರಿಗೂ ಧನ್ಯವಾದಗಳು.

ಕಾವೇರಿಯ ಶಕ್ತಿ ಅದರ ಸದಸ್ಯರಲ್ಲಿದೆ ಮತ್ತು ನಿಮ್ಮೆಲ್ಲರ ಸಕ್ರಿಯ ಭಾಗವಹಿಸುವಿಕೆ ಪ್ರಾಮುಖ್ಯ ಪಡೆದುಕೊಳುತ್ತದೆ. ನಿಮ್ಮಲ್ಲಿ ಪ್ರತಿಯೊಬ್ಬರನ್ನು ತೊಡಗಿಸಿಕೊಳ್ಳಲು, ನಿಮ್ಮ ಆಲೋಚನೆಗಳನ್ನು ಹಂಚಿಕೊಳ್ಳಲು ಮತ್ತು ನಮ್ಮ ಸಂಸ್ಥೆಯ ಸಂಪ್ರದಾಯಗಳನ್ನು ಮುಂದುವರಿಸಲು ಸಹಾಯ ಮಾಡುವಂತೆ ನಾನು ಕೇಳಿಕೊಳ್ಳುತ್ತೇನೆ. ಒಟ್ಟಾಗಿ, ನಾವು ಗಣನೀಯ ಕೆಲಸಗಳನ್ನು ಸಾಧಿಸಬಹುದು. ನಿಮ್ಮ ವೈಯಕ್ತಿಕ ಅಥವಾ ಕುಟುಂಬದ ಸದಸ್ಯತ್ವವನ್ನು ನವೀಕರಿಸಲು ಮತ್ತು ನಮ್ಮ ಕಾವೇರಿ ಕಾರ್ಯಕ್ರಮಗಳ ಭಾಗವಾಗಿರಲು ನಾನು ನಿಮ್ಮನ್ನು ವಿನಂತಿಸುತ್ತೇನೆ - http://www.kaverionline.org/membership_01.html. ನಮ್ಮ ಕಾರ್ಯಕ್ರಮಗಳನ್ನು ಪ್ರಭಾವಶಾಲಿಯಾಗಿ ನಡೆಸಲು ನಾವು ವಿವಿಧ ಹಂತಗಳಿಗೆ ಪ್ರಾಯೋಜಕತ್ವವನ್ನೂ ಬಯಸುತ್ತಿದ್ದೇವೆ. ನೀವು ಆಸಕ್ತಿ ಹೊಂದಿದ್ದರೆ ಅಥವಾ ಆಸಕ್ತಿ ಹೊಂದಿರುವವರು ನಿಮಗೆ ತಿಳಿದಿದ್ದರೆ, ದಯವಿಟ್ಟು ನಮ್ಮನ್ನು ಸಂಪರ್ಕಿಸಿ.

ಕಾವೇರಿ ಸಂಘದ ಏಳಿಗೆಯ ಬಗ್ಗೆ ನಿಮ್ಮ ವಿಚಾರಗಳು, ಸಲಹೆಗಳು ಅಥವಾ ಪ್ರಶ್ನೆಗಳನ್ನು ಕಳುಹಿಸಲು ನೀವು ನನ್ನನ್ನು presidentkaveri@gmail.com ಇಮೇಲ್ ಮೂಲಕ ಸಂಪರ್ಕಿಸಬಹುದು. ನಿಮ್ಮ ಅಭಿಪ್ರಾಯ ಎಷ್ಟೇ ಚಿಕ್ಕದಾದರೂ ಅಮೂಲ್ಯವಾಗಿರುತ್ತದೆ ಮತ್ತು ನಾವು ಅದನ್ನು ಕೇಳಲು ಸಿದ್ಧರಾಗಿದ್ದೇವೆ.ಅಧ್ಯಕ್ಷಗಿರಿಯ ಈ ಜವಾಬ್ದಾರಿಯನ್ನು ನನಗೆ ವಹಿಸಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳು. ನನ್ನ ಸಾಮರ್ಥ್ಯಕ್ಕೆ ತಕ್ಕಂತೆ ಕನ್ನಡದ ಸೇವೆ ಸಲ್ಲಿಸಲು ಉತ್ಸುಕಳಾಗಿದ್ದೇನೆ.
**P.S: ನಾವು ನಮ್ಮ ಮೊದಲ ಸಂಕ್ರಾಂತಿ ಕಾರ್ಯಕ್ರಮವನ್ನು 02/08/2025 @ Mclean High School, VA ನಲ್ಲಿ ನಡೆಸುತ್ತಿದ್ದೇವೆ. ದಯವಿಟ್ಟು ದಿನಾಂಕವನ್ನು ಉಳಿಸಿ ಮತ್ತು ನಿಮ್ಮ ಕುಟುಂಬ ಮತ್ತು ಸ್ನೇಹಿತರೊಂದಿಗೆ ಭಾಗವಹಿಸಿ.**

ಇತಿ ನಿಮ್ಮ,
ವಿಧೇಯಪೂರ್ವಕವಾಗಿ,
ಡಾ.ರೋಹಿಣಿ ಬಾಣಾವರ
ಅಧ್ಯಕ್ಷೆ
KEC 2025 ಸಮಿತಿ ಪರವಾಗಿ
ಕಾವೇರಿ ಕನ್ನಡ ಸಂಘ
http://kaverionline.org

Dear Kaveri Kutumba,

On behalf of the Kaveri Executive Committee 2025, I wish you all a very happy and prosperous new year!

I am deeply honored and enthusiastic to become the 53rd president of our esteemed Kaveri Kannada Sangha. I have been hearing about Kaveri since I was a kid growing up in India and feel grateful to be serving this organization in many roles that have now culminated in being the president. I draw inspiration from my predecessors and their teams for nurturing Kaveri and nourishing her for more than half a century. We have a stellar committee with existing members from previous years and fresh new faces who are excited and ready to conduct all events with great fervor. Over the years, we have collaborated and organized events that have received great feedback, and I am confident we can continue this momentum in the coming year. Thank you all for your steadfast support, continued and consistent encouragement and feedback.

Kaveri's strength lies in its members, and your active participation is crucial. I encourage each one of you to get involved, share your ideas, and help continue our organization's traditions. Together, we can achieve remarkable things. I kindly request members to renew their individual or family memberships at http://www.kaverionline.org/membership_01.html for the year 2025 and be part of our Kaveri events. We are seeking sponsorship for different tiers to conduct our events in an impactful way. Please reach out to us if you are interested or know anyone who is interested.

Please reach out to me with your ideas, questions, or concerns at presidentkaveri@gmail.com. Your input is invaluable, and we are here to listen. Thank you again for entrusting me with this role. I am eager to serve you all to the best of my abilities.

**P.S: We are having our first Sankranti event on 02/08/2025 @ Mclean High School, VA. Please save the date and participate with your family and friends.**

Sincerely,
Dr. Rohini Banavar
President
On behalf of KEC 2025
Kaveri Kannada Association
http://kaverionline.org